ಓ.ಎಸ್ಃ **110/2023**

ಪಿ. ಡಬ್ಲ್ಯೂ ಃ **01**

**<u>ಸಾಕ್ಷಿಗೆ ದಿನಾಂಕ 17.09.2025 ರಂದು ಪ್ರಮಾಣ ವಚನ ನೀಡಲಾಯಿತು.</u>**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳನ್ನು ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ/ಶ್ರೀಮತಿ ವಕೀಲರಿಂದ</u>**

ದಿನಾಂಕ 25.03.2021 ರಂದು ಆದ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, 1 ಮತ್ತು 2 ನೇ ಪ್ರತಿವಾದಿಯವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-1 ಎ ಮತ್ತು ಬಿ ಎಂದು, ಸಂತೋಷ ಕುಮಾರ ಹಾಗೂ ಚಂದ್ರುನಾಯಕ ಎಂಬುವವರು ಸಾಕ್ಷಿದಾರರಾಗಿ ಮಾಡಿದ್ದು ಅವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಹಿಗಳನ್ನು ನಿಪಿ-1 ಸಿ ಮತ್ತು 1 ಡಿ ಎಂದು, ದಿನಾಂಕ 20.01.2023 ರಂದು ನಮ್ಮ ವಕೀಲರ ಮೂಲಕ ಪ್ರತಿವಾದಿಯರಿಗೆ ಕಳುಹಿಸಿದ ನೋಟಿಸಿಗಳ ಕಚೇರಿಯ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-2 ಎಂದು, ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ನಿಪಿ-3 ಮತ್ತು 4 ಎಂದು, ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು, ಏಕಪಕ್ಷೀಯವಾಗಿದ್ದರಿಂದ ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಹುಣಸೂರು.**